## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 214(198) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಟಿ.ಎ. ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | KIADB ಯು 2010 ರಿಂದ 2023 ಡಿಸೆಂಬರ್ ಅಂತ್ಯದವರೆಗೆ ವಿವಿಧ ಬ್ಯಾಂಕುಗಳಲ್ಲಿ ಇರಿಸಿದ ಠೇವಣಿ ಮೊತ್ತ ಎಷ್ಟು; ಯಾವ ಉದ್ದೇಶಕ್ಕಾಗಿ ಠೇವಣಿ ಇರಿಸಲಾಗಿದೆ; (ವಿವರ ನೀಡುವುದು. | ಕೆಐಎಡಿಬಿ ಮಂಡಳಿಯು 2010 ರಿಂದ 2023 ಡಿಸೆಂಬರ್ ಅಂತ್ಯದವರೆಗೆ ವಿವಿಧ ಬ್ಯಾಂಕುಗಳಲ್ಲಿ ಠೇವಣಿ ಇಟ್ಟಿರುವ ಮೊತ್ತದ ವರ್ಷವಾರು ವಿವರಗಳನ್ನು ಈ ಕೆಳಕಂಡಂತಿವೆ : (ಕೆಳಗಿನ ಕೋಷ್ಟಕ) |

| ಕ್ರ. ಸಂ. | ವರ್ಷ | ಠೇವಣಿ ಇಟ್ಟಿರುವ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 1 | 2010-11 | 2140.37 |
| 2. | 2011-12 | 1816.55 |
| 3. | 2012-13 | 636.80 |
| 4. | 2013-14 | 156.00 |
| 5. | 2014-15 | 0.00 |
| 6. | 2015-16 | 50.00 |
| 7. | 2016-17 | 550.00 |
| 8. | 2017-18 | 2716.01 |
| 9. | 2018-19 | 4275.00 |
| 10. | 2019-20 | 154.00 |
| 11. | 2020-21 | 2.25 |
| 12. | 2021-22 | 400.00 |
| 13. | 2022-23 | 1200.10 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | KIADB ಯು ಯಾವುದಾದರೊಂದು ಬ್ಯಾಂಕಿನಲ್ಲಿ ಠೇವಣಿ ಇಡುವಾಗ ಅನುಸರಿಸುವ ಕಾರ್ಯ ವಿಧಾನಗಳೇನು; (ಸಂಪೂರ್ಣ ವಿವರ ನೀಡುವುದು) | 1. ರಾಷ್ಟ್ರೀಕೃತ ಮತ್ತು ಖಾಸಗಿ ಷೆಡ್ಯೂಲ್ಡ್ ಬ್ಯಾಂಕುಗಳಲ್ಲಿ ಕ್ರಮವಾಗಿ ಶೇ. 70% ಹಾಗೂ 30% ರ ಅನುಪಾತದಲ್ಲಿ ಮೊತ್ತವನ್ನು ಇಡಲಾಗುವುದು.<br>2. ರಿಸರ್ವ್ ಹಾಗೂ ಷೇರು ಬಂಡವಾಳಗಳ ಒಟ್ಟು ಮೊಬಲಗು ರೂ.100.00 ಕೋಟಿಗಳಿಗಿಂತ ಹೆಚ್ಚಿಗೆ ಹೊಂದಿರುವ ಬ್ಯಾಂಕುಗಳಲ್ಲಿ ಠೇವಣಿ ಇಡಲಾಗುವುದು.<br>3. ಬೆಂಗಳೂರು ಜಿಲ್ಲೆಗಳಲ್ಲಿನ ರಾಷ್ಟ್ರೀಕೃತ ಮತ್ತು ಖಾಸಗಿ ಷೆಡ್ಯೂಲ್ಡ್ ಬ್ಯಾಂಕುಗಳ ಶಾಖೆಗಳಲ್ಲಿ ಪತ್ರಿಕಾ ಜಾಹೀರಾತು ಮೂಲಕ ಟೆಂಡರ್ ಕರೆದು ಹೆಚ್ಚಿನ ಬಡ್ಡಿದರ ನೀಡುವ ಬ್ಯಾಂಕುಗಳಲ್ಲಿ ನಿಯಮಾನುಸಾರ ಠೇವಣಿ ಮೊತ್ತವನ್ನು ಇಡಲಾಗುವುದು. |

..2/-

| | | |
|---|---|---|
| ಇ) | ದಿನಾಂಕ:14.09.2011ರಂದು ಪಂಜಾಬ್ ನ್ಯಾಷನಲ್ ಬ್ಯಾಂಕ್ ನಲ್ಲಿ ಠೇವಣಿ ಇರಿಸಿದ ಮೊತ್ತ ಎಷ್ಟು; ಯಾವ ಉದ್ದೇಶಕ್ಕಾಗಿ ಠೇವಣಿ ಇಡಲಾಗಿತ್ತು; ಮತ್ತು ಹಿಂಪಡೆದ ಠೇವಣಿ ಮೊತ್ತ ಎಷ್ಟು;(ಸಂಪೂರ್ಣ ವಿವರ ನೀಡುವುದು) | ಮಂಡಳಿಯು ದಿನಾಂಕ: 14.09.2011 ರಂದು ರೂ.25 ಕೋಟಿ ಮೊತ್ತವನ್ನು ಒಂದು ವರ್ಷದ ಅವಧಿಗೆ ಶೇ. 9.75 ರಷ್ಟು ಬಡ್ಡಿದರದ ಮೇಲೆ ಪಂಜಾಬ್ ನ್ಯಾಷನಲ್ ಬ್ಯಾಂಕಿನ ರಾಜಾಜಿನಗರ ಶಾಖೆ, ಬೆಂಗಳೂರು ಇಲ್ಲಿ ಠೇವಣಿ ಇಡಲಾಗಿತ್ತು.<br>ಸದರಿ ಠೇವಣಿ ಮೊತ್ತದ ಪೈಕಿ ರೂ. 13.00 ಕೋಟಿಗಳು ಅಸಲು ಹಾಗೂ ಬಡ್ಡಿ ರೂ. 1,17,08,129/-ಸೇರಿದಂತೆ ಒಟ್ಟು ರೂ. 14,17,08,129/-ಗಳು ದಿನಾಂಕ:18.09.2012ರಂದು ಮಂಡಳಿಗೆ ಜಮಾ ಆಗಿರುತ್ತದೆ. |
| ಈ) | ಠೇವಣಿ ಮೊತ್ತ ಸಂಪೂರ್ಣ ಹಿಂಪಡೆಯದಿದ್ದಲ್ಲಿ ಕಾರಣಗಳೇನು? | ಬಾಕಿ ಉಳಿದ ರೂ.12.00 ಕೋಟಿ ಠೇವಣಿ ಮೊತ್ತವನ್ನು ಬ್ಯಾಂಕ್ ಪಾವತಿಸದೇ ಇರುವುದರಿಂದ ಪಂಜಾಬ್ ನ್ಯಾಷನಲ್ ಬ್ಯಾಂಕ್, ರಾಜಾಜಿನಗರ, ಇವರಿಗೆ ಮಂಡಳಿಯು ಪತ್ರ ಬರೆದು ಸದರಿ ಮೊತ್ತವನ್ನು ಪಾವತಿಸಲು ಕೋರಿರುವ ಮೇರೆಗೆ, ಸದರಿ ಶಾಖೆಯು ಪಂಜಾಬ್ ನ್ಯಾಷನಲ್ ಬ್ಯಾಂಕ್, ಶಂಕರಿ ವೆಸ್ಟ್ ಶಾಖೆ, ಸೇಲಂ ಜಿಲ್ಲೆ, ಇಲ್ಲಿಗೆ ಸದರಿ ಮೊತ್ತವನ್ನು ವರ್ಗಾಯಿಸಿರುವುದರಿಂದ ಹಾಗೂ ಶಂಕರಿ ವೆಸ್ಟ್ ಶಾಖೆಯು ಮಂಡಳಿಗೆ ಠೇವಣಿ ರಸೀದಿಯನ್ನು ನೀಡಿರುವುದರಿಂದ ಹಾಗೂ ಶಂಕರಿ ವೆಸ್ಟ್ ಶಾಖೆಯು ಮಂಡಳಿ ಅಧಿಕಾರಿಗಳ ಕೋರಿಕೆ ಮೇರೆಗೆ ಸದರಿ ಮೊತ್ತವನ್ನು ಖಾಸಗಿ ವ್ಯಕ್ತಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಿರುವುದಾಗಿ ಶಂಕರಿ ವೆಸ್ಟ್ ಶಾಖೆಯು ಪತ್ರ ಮುಖೇನ ತಿಳಿಸಿರುತ್ತದೆ.<br>ಸದರಿ ಪ್ರಕರಣದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ರಾಜಾಜಿನಗರ, ಶಾಖೆಯು ಮಂಡಳಿಯ ಠೇವಣಿ ಮೊತ್ತವನ್ನು ವಂಚನೆ (Fraud) ಮಾಡಿ ಅವಧಿ ಪೂರ್ವದಲ್ಲಿಯೇ ಬೇರೆಯವರ ಖಾತೆಗೆ ವರ್ಗಾಯಿಸಿರುವುದರಿಂದ ರೂ.12.00 ಕೋಟಿ + ಬಡ್ಡಿ ಹಣವು ಮಂಡಳಿಗೆ ಪಾವತಿಯಾಗದೇ ಇರುವುದರಿಂದ ವ್ಯವಸ್ಥಾಪಕರು, ಪಂಜಾಬ್ ನ್ಯಾಷನಲ್ ಬ್ಯಾಂಕ್, ರಾಜಾಜಿನಗರ ಶಾಖೆ, ಬೆಂಗಳೂರು, ಇವರ ಮೇಲೆ ರೂ. 12.00 ಕೋಟಿ ಠೇವಣಿ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸದೇ ಇರುವುದರಿಂದ ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು, ಇಲ್ಲಿ ಓ.ಎಸ್. ಸಂಖ್ಯೆ: 388/2014 ರಂತೆ ವಸೂಲಾತಿ ದಾವೆಯನ್ನು ಹೂಡಲಾಗಿದೆ. ಸದರಿ ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ. |

**ಸಂಖ್ಯೆ: ಸಿಐ 236 ಐಎಪಿ 2024**

**(ಎಂ.ಬಿ.ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**